೩) ಪ್ರಶ್ನೆ (೨)ಕ್ಕೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀರೂರು ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಮಾಹಿತಿ.

೧೪೨೨(೧೬೯೫)

ಶ್ರೀ ಮಲ್ಲಿಕಾರ್ಜುನ ಕೆ.ಬಿ.(ಬೀರೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳು ಯಾವುವು?

ಆ. ಸದರಿ ಕೆಲಸಗಳ ಅಚ್ಚುಕಟ್ಟು ಪ್ರದೇಶಗಳೆಷ್ಟು ಈ ಅಚ್ಚುಕಟ್ಟು ಪ್ರದೇಶಗಳಲ್ಲಿ ಒತ್ತುವರಿ ಆಗಿದೆಯೆ; ಒತ್ತುವರಿಯಾಗಿರುವ ಭೂಮಿ ವಿಸ್ತೀರ್ಣವೆಷ್ಟು;

ಇ. ಹಾಗಿದ್ದಲ್ಲಿ ಈ ಒತ್ತುವರಿ ಪ್ರದೇಶವನ್ನು ಖಿಲ್ಲಾ ಮಾಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೆ:

ಈ. ಸದರಿ ಕೆರೆಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು):

ಅ. ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಕೆರೆಗಳ ಪಟ್ಟಿಯನ್ನು ಅನುಬಂಧ-೧ರಲ್ಲಿ ಲಗತ್ತಿಸಿದೆ.

ಆ. ಅನುಬಂಧ-೧ ಕೆರೆಗಳ ಅಚ್ಚುಕಟ್ಟು ಪ್ರದೇಶದ ವಿವರಗಳನ್ನು ನೀಡಿದೆ. ಚಿಕ್ಕಮಗಳೂರು ಜಿಲ್ಲೆ ಸಿಂದಿಗೆರೆ ಹಳ್ಳಿಯ ಹೊಸಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಒತ್ತುವರಿಯಾದ ಬಗ್ಗೆ ವರದಿಯಾಗಿದೆ. ಈ ಬಗ್ಗೆ ಸಮೀಕ್ಷೆ ನಡೆಯುತ್ತಿದ್ದು ಸಮೀಕ್ಷಾ ವರದಿಯನ್ನು ನಿರೀಕ್ಷಿಸಲಾಗಿದೆ.

ಇ. ಸಮೀಕ್ಷೆ(ಸರ್ವೆ) ಕಾರ್ಯ ಮುಗಿದ ಕೂಡಲೇ ಒತ್ತುವರಿ ಪ್ರದೇಶವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ. ಸದ್ಯಕ್ಕೆ ೨೦೦೦-೦೧ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಚಿಕ್ಕಮಗಳೂರು ತಾಲ್ಲೂಕು ಹಳೇ ಲಕ್ಯ ಮಾದರಸನಕೆರೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ರೂ.೫೦೦೦೦ ಕೆರೆಗಳ ಜೀರ್ಣೋದ್ಧಾರ ನಿಧಿಯಿಂದ

ಮದರಹಳ್ಳಿ ಕೆರೆಯನ್ನು ಅಭಿವೃದ್ಧಿಗೊಳಿಸಿದೆ. ರೂ.೮೫೦೦೦ ಅನುದಾನವನ್ನು ಅಣೆಕಟ್ಟು ಮತ್ತು ಪಿಕಪ್ ಕಾಮಗಾರಿಯನ್ನು ಸಾಗರಾಳುಪುರ ಕೆರೆ, ಕಡೂರು ತಾಲ್ಲೂಕಿನಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ವಾರ್ಷಿಕ ದುರಸ್ತಿ ನಿಧಿಯಿಂದ ರೂ.೩೦೦೦೦ ದಿಂದ ಚಿಕ್ಕಬುಕ್ಕಸಾಗರ ಹೊಸಕೆರೆ ಕಾಲುವೆ ಅಭಿವೃದ್ಧಿಪಡಿಸಲಾಗಿದೆ.

ಅನುಬಂಧ-೧

ಬೀರೂರು ವಿಧಾನ ಸಭಾ ಕ್ಷೇತ್ರಕ್ಕೆ ಚಿಕ್ಕಮಗಳೂರು ತಾಲ್ಲೂಕಿನ ಲಕ್ಕಾ ಹೋಬಳಿ, ಕಡೂರು ತಾಲ್ಲೂಕಿನ ಬೀರೂರು ಹೋಬಳಿ ಸಖರಾಯಪಟ್ಟಣ ಹೋಬಳಿ ಮತ್ತು ದೇವನೂರು ಹೋಬಳಿ, ತರೀಕೆರೆ ತಾಲ್ಲೂಕಿನ ರಂಗದಹಳ್ಳಿ ಹೋಬಳಿಗಳು ಸೇರಿರುತ್ತವೆ.

ಚಿಕ್ಕಮಗಳೂರು ತಾಲ್ಲೂಕಿನ ಕೆರೆಗಳು:

೧) ಹಳೇಲಕ್ಕಾ ಮಾದರಸನ ಕೆರೆ	೧೪.೨೦ ಹೆಕ್ಟೇರ್
೨) ಸಾದರಹಳ್ಳಿ ಕೆರೆ	೨.೮೦
೩) ಮಾಚೇನಹಳ್ಳಿ ಕುರುಬರಹಳ್ಳಿ ಗೌರಿಕಟ್ಟೆ	೧೧.೭೫
೪) ವಡ್ಡರಹಳ್ಳಿ ದೊಡ್ಡಕೆರೆ	೫.೦೦
೫) ಸಿಂದಿಗೆರೆ ಹೊಸಕೆರೆ	೫.೦೦
೬) ಕಳಸಾಪುರ ಶೆಟ್ಟಿಕೆರೆ	೪.೨೦
೭) ಉದ್ದೇಬೋರನಹಳ್ಳಿ ದೊಡ್ಡಕೆರೆ	೩.೮೦
	೪೭.೪೧

ತರೀಕೆರೆ ತಾಲ್ಲೂಕು

೮) ಸುಣ್ಣದಹಳ್ಳಿ ಬಳಸೋಕಟ್ಟೆ	೭.೨೮
೯) " ವೀರಮ್ಮನ ಕೆರೆ	೧೧.೭೩
೧೦) " ತೋಟದ ಮುಂದಿನ ಕೆರೆ	೧೪.೨೧
೧೧) ಗುಳ್ಳದಮನೆ ದೊಡ್ಡಕೆರೆ	೯.೪೨
೧೨) ಕೆಂಚಾಪುರ ಕಡದಕೊಳಕಟ್ಟೆ	೬.೧೧
೧೩) ಬಳ್ಳಾವರ ಕೆರೆ	೧೦.೧೧

೧೪) ತ್ಯಾಗದಬಾಗಿ ಕೆರೆ	೧೪.೫೮
	೭೭.೪೪

ಕಡೂರು ತಾಲ್ಲೂಕು:

೧೫) ಹುಲ್ಲೇನಹಳ್ಳಿಕೆರೆ	೬.೦೦
೧೬) ಕಬಳಿಕೆರೆ	೮.೦೦
೧೭) ಕಾರೆಹಳ್ಳಿ ಕೆರೆ	೯.೪೦
೧೮) ಜೋಡಿಲಿಂಗದಹಳ್ಳಿ ಊರ ಮುಂದಿನಕೆರೆ	೧೦.೨೩
೧೯) ನಿಡಘಟ್ಟಹಳ್ಳಿ ಕೆರೆ	೧೪.೯೦
೨೦) ನಾಗರಾಳು ಊರ ಮುಂದಿನ ಕೆರೆ	೨೧.೮೦
೨೧) ಚಿಕ್ಕಬುಕ್ಕಸಾಗರ ಹೊಸ ಕೆರೆ	೧೪.೦೦
೨೨) ಜೋಡಿಹೋಚಿಹಳ್ಳಿ ಕೆರೆ	೧೩.೩೫
೨೩) ಚಿನ್ನಾಪುರ ಸೋಮನ ಕೆರೆ	೧೫.೭೨
೨೪) ಹೂವಿನಹಳ್ಳಿ ಇಟ್ಟಿಕೆರೆ	೧೬.೦೦
೨೫) ಪಟ್ಟಣಗೆರೆ ಕೆರೆ	೧೩.೦೦
೨೬) ಬ್ಯಾಲದಾಳು ಊರ ಮುಂದಿನ ಕೆರೆ	೮.೦೦
	೧೬೦.೪೦
	೨೮೫.೨೫ ಹೆಕ್ಟೇರ್